# ಏಕೆಂದರೆ..

■ ದೇವಿದಾಸ ಸುವರ್ಣ




ಮದುವೆ ಮನೆಯಲ್ಲಿ ಮದುವೆ ನೋಡುವ ಉದ್ದೇಶವಿದ್ದರೆ ಕಲ್ಯಾಣ ಮಂಟಪಕ್ಕೆ ಹೋಗಲೇ ಬೇಡಿ.

**ಏಕೆಂದರೆ**

ಅಲ್ಲಿ ವೇದಿಕೆಯ ಮೇಲೆ ವಧೂವರರು ಮಾಲೆ ಬದಲಾಯಿಸಿಕೊಳ್ಳುವುದು, ಇತ್ಯಾದಿ ಮದುವೆಯ ಕಾರ್ಯಗಳು ಕಾಣಿಸುವುದೇ ಇಲ್ಲ. ವೇದಿಕೆಯಲ್ಲಿ ಅನವಶ್ಯಕವಾಗಿ ತುಂಬಿರುವ ಜನರ, ಮೊಬೈಲ್‌ನಿಂದ ಫೋಟೊ ಹೊಡೆಯುತ್ತಿರುವವರ ಬೆನ್ನು ಮಾತ್ರ ಕಾಣಿಸುತ್ತಿರುತ್ತದೆ.

ಆಫೀಸಿನಲ್ಲಿ ರಜೆ ಪಡೆಯಬೇಕೇ? ಸೌಖ್ಯವಿಲ್ಲ ಎಂದು ಸುಳ್ಳು ಹೇಳಿ ರಜೆ ಪಡೆಯಲೇಬೇಡಿ.

**ಏಕೆಂದರೆ**

ರಜೆಯಲ್ಲಿ ಆನಂದಿಸಿ ಕೆಲಸಕ್ಕೆ ಹಾಜರಾಗುವ ದಿನವೇ ಅಸೌಖ್ಯದಿಂದ ನರಳುವ ಸಾಧ್ಯತೆ ಇರುತ್ತದೆ.

ಒಂದು ದಿನ ಮನೆಯಲ್ಲಿ ಊಟಕ್ಕೆ ಸರಿಯಾದ ಸಾರು, ವಗೈರೆ ಇಲ್ಲದಿದ್ದರೆ ಹೆಂಡತಿಯ ಮೇಲೆ ರೇಗಬೇಡಿ.

**ಏಕೆಂದರೆ**

ಅದೇ ಜೀವನದ ಕೊನೆಯ ಊಟವಲ್ಲ.

ನಿಮ್ಮ ಮಕ್ಕಳ ಮುಂದೆ ನಿಮ್ಮ ತಂದೆ ತಾಯಿಯರಿಗೆ ಹಿಂಸಿಸುವುದು, ಬೈಯ್ಯುವುದು, ತುಚ್ಛವಾಗಿ ನೋಡಿಕೊಳ್ಳುವುದು ಎಂದೂ ಮಾಡಲೇಬೇಡಿ.

**ಏಕೆಂದರೆ**

ಮುಂದೆ ನಿಮ್ಮ ಮಕ್ಕಳೂ ದೊಡ್ಡವರಾದಮೇಲೆ ನೀವು ನಿಮ್ಮ ತಂದೆ ತಾಯಿಯರಿಗೆ ಮಾಡಿದ್ದನ್ನೇ ನಿಮಗೆ ಮಾಡುವ ಸಾಧ್ಯತೆ ಇದೆ.

ಕಲಿಯುವ ಮಕ್ಕಳು ನಪಾಸಾದರೆ, ನೂರಕ್ಕೆ ಕಡಿಮೆ ಅಂಕ ತೆಗೆದುಕೊಂಡು ಪಾಸಾದರೆ ಅವರಿಗೆ ಹಿಂಸಿಸಬೇಡಿ, ಹೊಡೆಯಬೇಡಿ, ಬೈಯ್ಯಬೇಡಿ.

**ಏಕೆಂದರೆ**

ಜಗತ್ತಿನಲ್ಲಿ ದೊಡ್ಡ ದೊಡ್ಡ ಸಾಧನೆ ಮಾಡಿದ ಹಲವರು ಕಲಿಯುವಾಗ ನಪಾಸಾದವರೂ, ಕಡಿಮೆ ಅಂಕ ಗಳಿಸಿ ಪಾಸಾದವರೂ ಇದ್ದಾರೆ.

ಮದುವೆ ಮನೆಯಲ್ಲಿ ಕೈ ತೊಳೆದುಕೊಂಡು ಊಟಕ್ಕೆ ತೆರಳುತ್ತಿರುವಾಗ ಪರಿಚಿತರು ಹಸ್ತ ಲಾಘವ ನೀಡಲು ಬಂದರೆ ಹಸ್ತ ಲಾಘವ ನೀಡಲೇ ಬೇಡಿ. ಕೈ ಮುಗಿದು ಮುಂದಕ್ಕೆ ಸಾಗಿರಿ.

**ಏಕೆಂದರೆ**

ಆಗಲೇ ತೊಳೆದುಕೊಂಡಿರುವ ನಿಮ್ಮ ಕೈ ಅವರ ಹಸ್ತ ಲಾಘವದಿಂದ ಪುನಃ ಕಲುಷಿತವಾಗುವ ಸಾಧ್ಯತೆ ಇರುತ್ತದೆ.

ಪರೀಕ್ಷೆಗೆ ಅಭ್ಯಾಸ ಮಾಡುವಾಗ ಎಲ್ಲ ಪಾಠವನ್ನು ಓದಿಕೊಂಡು ಹೋಗಿ.

**ಏಕೆಂದರೆ**

ಯಾವುದನ್ನು ಕೇಳಲಿಕ್ಕಿಲ್ಲ ಎಂದು ಓದದೇ ಬಿಟ್ಟಿರುತ್ತೇವೆಯೋ ಪರೀಕ್ಷೆಯಲ್ಲಿ ಅದನ್ನೇ ಕೇಳುವ ಸಾಧ್ಯತೆ ಇರುತ್ತದೆ.

ಡಾಕ್ಟರರ ಬಳಿ ಹೋದಾಗ ನಿಮಗೆ ಕೂಡಲೇ ಆಪರೇಷನ್ ಮಾಡಲೇಬೇಕು. ಜೀವಕ್ಕೆ ಅಪಾಯವಿದೆ ಎಂದು ಡಾಕ್ಟರರು ಹೇಳಿದರೆ ಗಾಬರಿ ಆಗಬೇಡಿ.

**ಏಕೆಂದರೆ**

ನಿಮಗೆ ಅಂತಹದ್ದೇನೂ ಆಗಿಲ್ಲ, ಔಷಧದಿಂದಲೇ ಗುಣಪಡಿಸುತ್ತೇನೆ ಎನ್ನುವ ಬೇರೆ ಡಾಕ್ಟರರೂ ಇರುತ್ತಾರೆ.